ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಸಂಖ್ಯೆ: ಕಸಂವಿ/ಅ.ನಾ/ಪ.ಬಿ.ಎ.ಹಾಗೂ.ಎಂ.ಎ/ದಾ.ಪ್ರಕ/2023–24 ದಿನಾಂಕ: 16/09/2023

## ಪರಿಷ್ಕೃತ ಅಧಿಸೂಚನೆ (ಪರಿಸರ)

ವಿಷಯ: – 2023–24 ನೇ ಶೈಕ್ಷಣಿಕ ಸಾಲಿನ ಪರಿಸರದ ಬಿ.ಎ ತರಗತಿ ವಿದ್ಯಾರ್ಥಿಗಳ ಪ್ರವೇಶಾತಿಗಾಗಿ UUCMS ಮುಖಾಂತರ Online –ನಲ್ಲಿ ಅರ್ಜಿ ಸಲ್ಲಿಸುವ ಬಗೆಗೆ .

ಉಲ್ಲೇಖ :–ಸರ್ಕಾರಿ ಆದೇಶ ಸಂಖ್ಯೆ:ಇಡಿ 162 ಯುಎನ್ಇ 2023 ದಿನಾಂಕ:–13.09.2023.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2023–24 ನೇ ಶೈಕ್ಷಣಿಕ ಸಾಲಿನ ಅವಧಿಗೆ ಪರಿಸರದ ಸಂಸ್ಕೃತ ಬಿ.ಎ ಪ್ರಥಮ ಮತ್ತು ಸಂಜೆ ಕಾಲೇಜು ಸಂಸ್ಕೃತ ಬಿ.ಎ.ಪ್ರಥಮ ಹಾಗೂ ಬಿ.ಎ.ಶಾಸ್ತ್ರ (ವ್ಯಾಕರಣ, ನ್ಯಾಯ, ಅಲಂಕಾರ, ಯೋಗ) ಪದವಿ ಮತ್ತು ಹಾನರ್ಸ್ ಕೋರ್ಸ್‌ಗಳ ಪ್ರವೇಶಾತಿಗಾಗಿ UUCMS ಮುಖಾಂತರ ಆನ್‌ಲೈನ್–ನಲ್ಲಿಯೇ ಕಡ್ಡಾಯವಾಗಿ ಅರ್ಜಿಸಲ್ಲಿಸಬೇಕೆಂದು ಸರ್ಕಾರಿ ಆದೇಶದಲ್ಲಿ ತಿಳಿಸಿರುವುದರಿಂದ ಸಂಸ್ಕೃತ ಬಿ.ಎ. ಪ್ರಥಮ ವರ್ಷದ ಪ್ರೊಗ್ರಾಂಗಳಿಗೆ ಪ್ರವೇಶಾತಿ ಬಯಸಿ ಬರುವ ಅರ್ಹ ವಿದ್ಯಾರ್ಥಿಗಳಿಗೆ UUCMS Portal ನಲ್ಲಿ Online ನಲ್ಲಿ ಅರ್ಜಿ ಸಲ್ಲಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ:– 23/09/2023 (ದಂಡ ಸಹಿತವಾಗಿ)

ವಿ.ಸೂ.– ಹೊಸ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ಲ್ಲಿರುವ ಈ ಲಿಂಕನ್ನು https:/uucms.karnataka.gov.in ಉಪಯೋಗಿಕೊಂಡು ಪ್ರವೇಶಾತಿ ಅರ್ಜಿಯನ್ನು ಪೂರೈಸಲು ಈ ಮೂಲಕ ಸೂಚಿಸಲಾಗಿದೆ.

P.U.C ಪೂರಕ ಪರೀಕ್ಷೆ ಮುಗಿಸಿದ ವಿದ್ಯಾರ್ಥಿಗಳಿಗೆ ಫಲಿತಾಂಶ ಪ್ರಕಟವಾದ ದಿನದಿಂದ 10 ದಿನದ ಒಳಗೆ ದಂಡ ಸಹಿತವಾಗಿ ಪ್ರವೇಶಾತಿ ನೀಡಲಾಗಿದೆ.

**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2023–24 ನೇ ಶೈಕ್ಷಣಿಕ ಸಾಲಿನ ಅವಧಿಗೆ ಈ ಕೆಳಕಂಡ ಕೋರ್ಸ್‌ಗಳನ್ನು ಆರಂಭಿಸಿದೆ.**

| ಕ್ರ.ಸಂ | ತರಗತಿಗಳು (ಪದವಿ ಮತ್ತು ಹಾನರ್ಸ್ ಕೋರ್ಸ್‌ಗಳು) | ಅರ್ಹತೆ (ಬಿ.ಎ ತರಗತಿ) | ಶುಲ್ಕದ ವಿವರಗಳು |
|---|---|---|---|
| 1 | 1. ಸಂಸ್ಕೃತ ಬಿ.ಎ.ಪ್ರಥಮ ಬೆಳಗಿನ ಕಾಲೇಜು (ಸಾಮಾನ್ಯ ಸಂಸ್ಕೃತ)<br>2.ಸಂಸ್ಕೃತ ಬಿ.ಎ.ಪ್ರಥಮ ಸಂಜೆ ಕಾಲೇಜು (ಸಾಮಾನ್ಯ ಸಂಸ್ಕೃತ)<br>3.ಬಿ.ಎ.ಪ್ರಥಮ ಶಾಸ್ತ್ರ (ಬಿ.ಎ.ವ್ಯಾಕರಣ ಬಿ.ಎ.ಅಲಂಕಾರ, ಬಿ.ಎ.ನ್ಯಾಯ, ಬಿ.ಎ. ಯೋಗ) | (ಬೆಳಗಿನ ಕಾಲೇಜು &, ಸಂಜೆ ಕಾಲೇಜು & ಬಿ.ಎ ಶಾಸ್ತ್ರ ಎಂಬ ಮೂರು ವಿಭಾಗಗಳಲ್ಲಿ ಆರಂಭಗೊಳ್ಳುತ್ತದೆ.)<br>1. ಪಿ.ಯು.ಸಿ, ಸಾಹಿತ್ಯ, ಅಥವಾ ತತ್ಸಮಾನ ತರಗತಿಗಳಲ್ಲಿ ಸಂಸ್ಕೃತವನ್ನು ಭಾಷೆಯಾಗಿ ಆಯ್ಕೆ ಮಾಡಿಕೊಂಡವರು<br>2. ಸಂಸ್ಕೃತರಹಿತ ಪದವಿ ಪೂರ್ವ ಶಿಕ್ಷಣ/ತತ್ಸಮಾನ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣತೆ. | ವಾರ್ಷಿಕ ಶುಲ್ಕ<br>ಸಾಮಾನ್ಯ ವಿದ್ಯಾರ್ಥಿಗಳಿಗೆ– 4500/–<br>ಎಸ್.ಸಿ./ಎಸ್.ಟಿ./ಪ್ರವರ್ಗ–1,/ ವಿದ್ಯಾರ್ಥಿಗಳಿಗೆ– 50% ವಿನಾಯಿತಿ –2250/– |

Scanned with OKEN Scanner

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेट, बेङ्गलूरु – ५६००१८.

1. ಸರ್ಕಾರದ ಆದೇಶದಂತೆ, 2023–24 ನೇ ಸಾಲಿನ ಪರಿಸರದ **ಸಂಸ್ಕೃತ ಬಿ.ಎ ಪ್ರಥಮ ಮತ್ತು ಸಂಜೆ ಕಾಲೇಜು ಬಿ.ಎ.ಪ್ರಥಮ ಹಾಗೂ ಬಿ.ಎ.ಶಾಸ್ತ್ರ** ಪದವಿ ಮತ್ತು ಹಾನರ್ಸ್ ಕೋರ್ಸ್‌ಗಳ ಪ್ರವೇಶಾತಿಯು ಆನ್‌ಲೈನ್ ಮೂಲಕವೇ ನಡೆಯಲಿದೆ.
2. ಆನ್‌ಲೈನ್ ಪ್ರವೇಶಾತಿ ಸಂಬಂಧ ವಿಶ್ವವಿದ್ಯಾಲಯದಲ್ಲಿ Help Desk ಲ್ಲಿ ಸ್ಥಾಪಿಸಲಾದ ಸಹಾಯವಾಣಿಯನ್ನು ಉಪಯೋಗಿಸಿಕೊಳ್ಳತಕ್ಕದ್ದು.
3. ಪ್ರವೇಶಾತಿಗೆ ಬರುವ ವಿದ್ಯಾರ್ಥಿಗಳಿಗೆ NEP ಅನುಸಾರ ಕಳೆದ ಶೈಕ್ಷಣಿಕ ಸಾಲಿನಲ್ಲಿ ಜಾರಿಯಲ್ಲಿದ್ದ Model Structure ನಂತೆ ವಿಷಯಗಳ ಬಗ್ಗೆ ವಿವರಣೆ ನೀಡಲು ವಿಶ್ವವಿದ್ಯಾಲಯದ ವೆಬ್‌ಸೈಟ್‌ಲಿರುವ ಈ Help Desk ಸಹಾಯವನ್ನು ಪಡೆಯಲು ಸೂಚಿಸಲಾಗಿದೆ.
4. ಆಯಾ ವಿಭಾಗಗಳ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ First-Cum-First Serve ಪ್ರಕಾರ ಪ್ರವೇಶಾತಿ ಸೌಲಭ್ಯವನ್ನು ಸಹ **UUCMS** ನಲ್ಲಿ ಅವಕಾಶ ಕಲ್ಪಿಸಿರುವುದರಿಂದ ನಿಗದಿತ ಸಮಯದೊಳಗೆ ಪ್ರವೇಶಾತಿ ಪಡೆದುಕೊಳ್ಳಲು ಸೂಚಿಸಿದೆ.
5. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವೆಬ್‌ಸೈಟ್‌ಲ್ಲಿ https:/uucms.karnataka.gov.in/ ಈ Portal ಗೆ ಲಿಂಕ್ ನೀಡಿ ವಿದ್ಯಾರ್ಥಿಗಳು/ಪೋಷಕರುಗಳು ಮಾಹಿತಿಯನ್ನು ಪಡೆದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.
6. ಆನ್‌ಲೈನ್‌ನಲ್ಲಿ ದಾಖಲಾತಿ ಪ್ರಕ್ರಿಯೆಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಸೂಚಿಸಿದೆ.
7. ಬಿ.ಎ ತರಗತಿಗಳು ಸೆಮಿಸ್ಟರ್ ಪದ್ಧತಿಯಲ್ಲಿ ನಡೆಯುತ್ತವೆ.
8. ಎಲ್ಲಾ ತರಗತಿಗಳು ಭೌತಿಕವಾಗಿ ನಡೆಯುತ್ತವೆ.
9. ಪ್ರವೇಶ ಅರ್ಜಿಯನ್ನು ಭರ್ತಿ ಮಾಡಿ ಒಂದು ಪ್ರತಿಯನ್ನು ಒಂದು ತಿಂಗಳ ಒಳಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕು.
10. ಅರ್ಜಿ ಪ್ರತಿಗಳು ಮತ್ತಿತರ ಶೈಕ್ಷಣಿಕ ವಿವರಗಳು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಲಭ್ಯವಿರುತ್ತದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **"ಕುಲಸಚಿವರು / ಅಧ್ಯಯನಾಂಗದ ನಿರ್ದೇಶಕರು"** ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–560018' ಇವರ ಕಛೇರಿಯನ್ನು ಸಂಪರ್ಕಿಸಬಹುದು ಅಥವಾ ವಿಶ್ವವಿದ್ಯಾಲಯದ ಜಾಲತಾಣಗಳಲ್ಲಿ 1.**www.ksu.ac.in** **2. ksu.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದು.

ಡಾ ರೂಪಶ್ರೀ.ಎಸ್.ಕ.ಆ.ಸೇ
**ಕುಲಸಚಿವರು**
**ಕ.ಸಂ.ವಿ ಬೆಂಗಳೂರು–560018**

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
2. ಮಾನ್ಯ ಕುಲಸಚಿವರ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
3. ಹಣಕಾಸು ಅಧಿಕಾರಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
4. ಪರೀಕ್ಷಾ ನಿಯಂತ್ರಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
5. ಸಂಸ್ಕೃತ ಬಿ.ಎ.ಸಂಯೋಜಕರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
6. ಪ್ರಾಚಾರ್ಯರು,ಸಂ.ಸ.ಕಾ.ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
7. ಶಾಸ್ತ್ರ.ಬಿ.ಎ.ಸಂಯೋಜಕರು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
8. ಸಿಸ್ಟಂ ಅನಾಲಿಸ್ಟ್, ಐ.ಟಿ ಸೆಲ್ ಮುಖ್ಯಸ್ಥರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–18.
9. ಸಿ.ಡಿ.ಸಿ.ಸಂಯೋಜಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ .
10. ಕಛೇರಿ ಪ್ರತಿ ಮತ್ತು ರಕ್ಷಾ ಪ್ರತಿ.

Scanned with OKEN Scanner